# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 390 |
| ಸದಸ್ಯರ ಹೆಸರು | : | ಶ್ರೀ ಹೆಚ್.ಎಂ.ರಮೇಶ ಗೌಡ |
| ಉತ್ತರಿಸುವ ದಿನಾಂಕ | : | 23.09.2020. |
| ಉತ್ತರಿಸುವ ಸಚಿವರು | : | ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಇಲಾಖಾ ಸಚಿವರು. |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯಾದಾದ್ಯಂತ ಕಳೆದೆರಡು ವರ್ಷಗಳಿಂದ ಸಮಾಜ ಕಲ್ಯಾಣ ಇಲಾಖೆಯಡಿ ನಡೆಸಲಾದ ಕಾರ್ಯಕ್ರಮಗಳಿಗೆ ಬಿಡುಗಡೆಯಾದ ಅನುದಾನವೆಷ್ಟು ಹಾಗೂ ಖರ್ಚಾದ ಹಣವೆಷ್ಟು; (ಮಾಹಿತಿ ನೀಡುವುದು)</td><td>ಕಳೆದೆರಡು ವರ್ಷಗಳಿಂದ ಸಮಾಜ ಕಲ್ಯಾಣ ಇಲಾಖೆಯ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾದ ಮತ್ತು ವೆಚ್ಚ ಮಾಡಲಾದ ವಿವರಗಳು ಈ ಕೆಳಗಿನಂತಿವೆ.<br>ಸಮಾಜ ಕಲ್ಯಾಣ ಇಲಾಖೆ:
<table>
<tr><th colspan="2">2018-19</th><th colspan="2">2019-20</th></tr>
<tr><th>ಬಿಡುಗಡೆ</th><th>ಖರ್ಚು</th><th>ಬಿಡುಗಡೆ</th><th>ಖರ್ಚು</th></tr>
<tr><td>517302.74</td><td>516158.55</td><td>418857.83</td><td>413959.62</td></tr>
</table>
ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ:
<table>
<tr><th colspan="2">2018-19</th><th colspan="2">2019-20</th></tr>
<tr><th>ಬಿಡುಗಡೆ</th><th>ಖರ್ಚು</th><th>ಬಿಡುಗಡೆ</th><th>ಖರ್ಚು</th></tr>
<tr><td>167428.86</td><td>163513.81</td><td>131814.17</td><td>128154.24</td></tr>
</table>
</td></tr>
<tr><td>ಆ)</td><td>ಇಲಾಖೆಯಿಂದ ಗ್ರಾಮೀಣ ಭಾಗದ ಯುವಕ ಯುವತಿಯರಿಗೆ ವಿಶೇಷ ಯೋಜನೆಗಳು ಮತ್ತು ರಚನಾತ್ಮಕ ಕಾರ್ಯಕ್ರಮಗಳ ಬಗ್ಗೆ ತರಬೇತಿ ನೀಡಲಾಗುತ್ತಿದೆಯೇ;</td><td>ಇಲಾಖೆ ಮತ್ತು ನಿಗಮಗಳ ಮೂಲಕ ವಾಹನ ಚಾಲಕ ತರಬೇತಿ ಗಣಕಯಂತ್ರ, ಪಾರಂಪರಿಕ ಕಸೂತಿ ಕಲೆ, ಹೊಲಿಗೆ ತರಬೇತಿ ಬ್ಯೂಟಿ ಪಾರ್ಲರ್, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ, ಗ್ರಾಮೀಣ ಭಾಗದ ಯುವಜನರಿಗೆ ಕೌಶಲ್ಯ ತರಬೇತಿ ಮುಂತಾದ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗುತ್ತಿದೆ.</td></tr>
<tr><td>ಇ)</td><td>ಸಮಾಜ ಕಲ್ಯಾಣ ಇಲಾಖೆಯ ಕೆಲವು ಕಾರ್ಯಕ್ರಮಗಳು ಜಿಲ್ಲೆಗಳಲ್ಲಿ ಅತ್ಯಂತ ನಿಷ್ಕ್ರಿಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಸಮಾಜ ಕಲ್ಯಾಣ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ವಿವಿಧ ನಿಗಮಗಳಲ್ಲಿ ಅನುಷ್ಠಾನಗೊಳಸುತ್ತಿರುವ ಯಾವುದೇ ಕಾರ್ಯಕ್ರಮಗಳು ನಿಷ್ಕ್ರಿಯವಾಗಿರುವುದಿಲ್ಲ.</td></tr>
<tr><td>ಈ)</td><td>ಕೋವಿಡ್ ನಂತರದ ದಿನಗಳಲ್ಲಿ ಸಾಮಾಜಿಕ ಅಭಿವೃದ್ಧಿ ಯಾವ ಹೊಸ ಯೋಜನೆಗಳನ್ನು ರೂಪಿಸಲಾಗುವುದು? (ವಿವರ ನೀಡುವುದು)</td><td>ಕೋವಿಡ್-19 ರ ಹಿನ್ನೆಲೆಯಲ್ಲಿ 2020-21ನೇ ಸಾಲಿನಲ್ಲಿ ನೇರಸಾಲ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ತರಕಾರಿ, ಹಣ್ಣು-ಹಂಪಲು, ಮೀನು ಮಾರಾಟ, ಕುರಿ/ಹಂದಿ/ಮೊಲ ಸಾಕಾಣಿಕೆ ಮುಂತಾದ ಕಿರು ಆರ್ಥಿಕ ಚಟುವಟಿಕೆಗಳಿಗಾಗಿ ಮಳಿಗೆ/ ತಳ್ಳುಗಾಡಿ ದುಡಿಮೆ ಬಂಡವಾಳ ಸೇರಿದಂತೆ ಗರಿಷ್ಟ ಘಟಕ ವೆಚ್ಚ ರೂ.50,000/-ದಲ್ಲಿ 50% ನಿಗಮದಿಂದ ನೇರಸಾಲ ಮತ್ತು 50% ಸಹಾಯಧನವನ್ನು ಒದಗಿಸಿ ಯೋಜನೆಯನ್ನು ಅನುಷ್ಠಾನಗೊಳಸಲಾಗುವುದು.</td></tr>
</table>

ಸಂಖ್ಯೆ: ಸಕಇ 66 ಆರ್&ಐ 2020

(ಗೋವಿಂದ ಎಂ ಕಾರಜೋಳ)
ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ
ಹಾಗೂ ಸಮಾಜ ಕಲ್ಯಾಣ ಸಚಿವರು.